ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD ISSN: 2582-2284**
**Vol-3 Issue 6, MAY-JUNE 2022, Pp.1-7.**
**©*IIMRD*, Mysuru**

IIMRD JOURNALS

**www.iimrd.com**

# ಎಲ್.ಎಸ್. ಶೇಷಗಿರಿರಾವ್ ಅವರ 'ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ': ಒಂದು ವಿಶ್ಲೇಷಣೆ

**ಡಾ.ಅನ್ನಪೂರ್ಣ ಗುಡುದೂರು***

*ಕನ್ನಡ ಸಹಾಯಕ ಪ್ರಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಕಂಪ್ಲಿ, ಬಳ್ಳಾರಿ ಜಿಲ್ಲೆ.

**ಸಾರಾಂಶ: (Abstract)**

*ಎಲ್.ಎಸ್. ಶೇಷಗಿರಿರಾವ್ ಅವರ 'ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ' ಕೃತಿಯು ಚಿಕ್ಕದಾದರೂ ಅದರ ರಚನೆ, ಸ್ವರೂಪ, ಪಾತ್ರಗಳ ಸೃಷ್ಟಿ ಮೊದಲಾದವು ಆಕರ್ಷಕವಾದವುಗಳು. ಎಲ್.ಎಸ್. ಶೇಷಗಿರಿರಾವ್‌ರವರು ಕೇವಲ ಸಾಮಾನ್ಯ ವಿಮರ್ಶಕರಲ್ಲ ಎಲ್ಲ ಕಾಲಘಟ್ಟದ ಸಾಹಿತ್ಯ ಕೃತಿಗಳನ್ನು ವಿಮರ್ಶಿಸಿ ಸಮನ್ವಯ ಸಾಧಿಸಿದ ಸಾಧಕರು. ಕನ್ನಡ ಮಾತ್ರವಲ್ಲದೆ ಇಂಗ್ಲಿಷ್ ಸಾಹಿತ್ಯದಲ್ಲಿಯೂ ಕೂಡ ಇವರ ವಿಮರ್ಶೆ ಸಾಗಿದೆ. ಪ್ರಸ್ತುತ ಲೇಖನದಲ್ಲಿ ಎಲ್.ಎಸ್. ಶೇಷಗಿರಿರಾವ್‌ರವರ ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ ಕೃತಿಯನ್ನು ಕುರಿತು ವಿಮರ್ಶಿಸಲಾಗಿದೆ.*

**ಮುಖ್ಯಪದಗಳು (Keywords):** ಎಲ್ ಎಸ್ ಶೇಷಗಿರಿರಾವ್, ಕನ್ನಡ ಕಾದಂಬರಿ, ಕನ್ನಡ ಸಾಹಿತ್ಯ.

## ಪೀಠಿಕೆ

ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳ ಧ್ಯೇಯ ಧೋರಣೆಗಳನ್ನು ಬಲ್ಲವರಾಗಿದ್ದ ಎಲ್ ಎಸ್ ಶೇಷಗಿರಿರಾವ್‌ರವರು ಭಾಷೆಯೊಂದರ ಸಾಹಿತ್ಯ ಚರಿತ್ರೆಯ ವಿಮರ್ಶೆಯನ್ನು ಬರೆದಿರುವುದು ಆಶ್ಚರ್ಯದ ಸಂಗತಿಯಲ್ಲ. ಏಕೆಂದರೆ ಎಲ್.ಎಸ್.ಎಸ್ ಅವರ ಬೌದ್ಧಿಕ ಜ್ಞಾನ, ಸಾಹಿತ್ಯದೊಂದಿಗಿನ ಒಡನಾಟ ಅವರನ್ನು ವ್ಯಾಪಕವಾಗಿ ಈ ಕಾರ್ಯಕ್ಕೆ ತೊಡಗುವಂತೆ ಮಾಡಿದೆ. ಸುಖಾಸುಮ್ಮನೆ, ಗ್ರೀಕ್ ರಂಗಭೂಮಿ ಮತ್ತು ನಾಟಕ, ಇಂಗ್ಲಿಷ್ ಸಾಹಿತ್ಯ ಚರಿತ್ರೆ,ಹೊಸಗನ್ನಡ ಸಾಹಿತ್ಯ ಚರಿತ್ರೆ ಬರೆಯುವುದು ಅಷ್ಟು ಸುಲಭವಲ್ಲ. ಈ ಕೃತಿಗಳ ವಿಷಯಗಳ ಹಿಂದೆ ಅವರ ಆಸಕ್ತಿ, ಪರಿಶ್ರಮ, ತಮ್ಮ ತಾಯಿ ನಾಡಿನ ಓದುಗರಿಗೆ ಜಗತ್ತಿನ ಸಾಹಿತ್ಯವನ್ನು ಪರಿಚಯಿಸಬೇಕೆಂಬ ಹಂಬಲ ಎಲ್ಲವು ಕಾರಣಗಳಾಗಿವೆ.

ಆರಂಭದಲ್ಲಿ ಕತೆಗಾರರಾಗಿ ಸಾಹಿತ್ಯ ರಂಗಕ್ಕೆ ಪ್ರವೇಶ ಮಾಡಿದರೂ ಶೇಷಗಿರಿರಾಯರೂ ವಿಮರ್ಶೆಯ ನೆಲೆಯಲ್ಲಿಯೇ ತಮ್ಮನ್ನು ಮುಂದೆ ಗುರುತಿಸಿಕೊಂಡರು. ಇವರು ಬರೆದ ವಿಮರ್ಶಾ ಕೃತಿಗಳಲ್ಲಿ ಸಾಹಿತ್ಯ ಪ್ರಕಾರಗಳನ್ನು ತಮ್ಮ ಸೈದ್ಧಾಂತಿಕ ಚಿಂತನೆಯಲ್ಲಿ ವಿವೇಚಿಸಿರುವ ಕೃತಿಯ ಸಾಲಿಗೆ ಪ್ರಸ್ತುತ 'ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ' ಸೇರುತ್ತದೆ. ಪಾಶ್ಚಾತ್ಯ ಸಾಹಿತ್ಯದ ಕಾದಂಬರಿ ಪ್ರಕಾರದ ಆಳ ಅಗಲಗಳನ್ನು ಅರಿತಿದ್ದ ಇವರಿಗೆ ಕನ್ನಡದ ಕಾದಂಬರಿ ಪ್ರಕಾರ ಓದುಗರನ್ನು ಹೆಚ್ಚು ಆಕರ್ಷಿಸಿರುವ ಅಂಶ ಬಹುಬೇಗ

*Please cite this article as:* *ಅನ್ನಪೂರ್ಣ ಗುಡುದೂರು.* (2022). ಎಲ್.ಎಸ್. ಶೇಷಗಿರಿರಾವ್ ಅವರ 'ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ': ಒಂದು ವಿಶ್ಲೇಷಣೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(5). ಪು.ಸಂ. 1–7.*

ತಿಳಿಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಆಹ್ವಾನದ ಮೇರೆಗೆ 1957ರಷ್ಟು ಹಿಂದೆಯೇ ಬರೆದ ಮೊಟ್ಟಮೊದಲ ರಾಯರ ವಿಮರ್ಶಾ ಕೃತಿ ಇದು. ವಸಂತ ಪ್ರಕಾಶನವು ಈ ಕೃತಿಯ ಮೂರನೆಯ ಮುದ್ರಣವನ್ನು 2008ರಲ್ಲಿ ತಂದಿದೆ. ಒಟ್ಟು ಒಂಬತ್ತು ಅಧ್ಯಾಯಗಳನ್ನು ಒಳಗೊಂಡಿರುವ ಈ ಕೃತಿಯು ಒಟ್ಟು 128 ಪುಟಗಳನ್ನು ಹೊಂದಿದೆ.

ಕೃತಿಯ ಮೊದಲ ಅಧ್ಯಾಯವು ವಿಶೇಷ ಹಾಗೂ ಆಕರ್ಷಕವಾಗಿದೆ. ಒಬ್ಬ ಕಾಲ್ಪನಿಕ ವ್ಯಕ್ತಿಯೊಂದಿಗೆ ಸಂವಾದ ನಡೆಸುವ ಮೂಲಕ ಸಾಮಾನ್ಯ ಓದುಗರು ಕಾದಂಬರಿ ಪ್ರಕಾರವನ್ನು ಇಷ್ಟಪಡುವುದಕ್ಕೆ ಕಾರಣವನ್ನು ತಿಳಿಸಿರುವುದು ಓದುಗರಿಗೆ ಇಷ್ಟವಾಗುತ್ತದೆ. ಸಂಭಾಷಣೆಗಳನ್ನು ಚತುರತೆಯಿಂದ ಎಲ್.ಎಸ್.ಎಸ್ ಬರೆಯಬಲ್ಲರೂ ಎಂಬುದನ್ನು ಇದು ತಿಳಿಸುತ್ತದೆ. ಕತೆಯೆಂದರೇನು? ಕಾದಂಬರಿಯೆಂದರೇನು? ಕತೆಗೂ ಕಾದಂಬರಿಗೂ ಇರುವ ವ್ಯತ್ಯಾಸಗಳೇನು? ಒಂದು ಉತ್ತಮ ಕಾದಂಬರಿ ಎನಿಸಿಕೊಳ್ಳಬೇಕಾದರೆ ಅದರಲ್ಲಿ ಏನೇನಿರಬೇಕು?, ಕಾದಂಬರಿ ಮನರಂಜನೆಯ ಸಾಧನವೇ? ವೈಚಾರಿಕ ವಿಶ್ಲೇಷಣೆಯ ಸಾಧನವೇ? ಎಂಬ ಚರ್ಚೆಗಳು ಇಲ್ಲಿವೆ. "ಕಾದಂಬರಿಕಾರನ ಉದ್ದೇಶ ಎಷ್ಟೇ ಹಿರಿಯದಾದರು, ಕ್ರಾಂತಿಕಾರಕವಾದರೂ ಕತೆಯ ಅಂಶವನ್ನು ತ್ಯಜಿಸಿ ತನ್ನ ಧ್ಯೇಯವನ್ನು ಸಾಧಿಸುವಂತಿಲ್ಲ"[1] ಎಂದಿರುವ ಕೃತಿಕಾರರು ಕಾದಂಬರಿಯಲ್ಲಿ ಕತೆಯ ಅಂಶದ ಪ್ರಾಮುಖ್ಯವನ್ನು ತಿಳಿಸಿದ್ದಾರೆ.ಕಾದಂಬರಿ ಸಾಮಾಜಿಕ ಕ್ರಾಂತಿಯ ಸಾಧನವಾಗಬೇಕು, ಮನುಷ್ಯನ ಹೃದಯ ವೈಶಿಷ್ಟ್ಯ ವೈಚಿತ್ರ್ಯಗಳನ್ನು ತೋರಿಸುವಂತಿರಬೇಕು ಎಂಬ ವಾದಗಳನ್ನು ಒಪ್ಪಿ ಇವುಗಳನ್ನು ಉತ್ತಮ ಕಾದಂಬರಿ ಸಾಧಿಸುವುದರಲ್ಲಿ ಸಂಶಯವಿಲ್ಲವೆಂದು ಅಭಿವ್ಯಕ್ತಿಸಿದ್ದಾರೆ.

ಕಾದಂಬರಿಯಲ್ಲಿ ಕತೆ ಯಾವ ರೀತಿ ಮೂಡಿ ಬರಬೇಕು ಎಂಬುದನ್ನು ಎರಡನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಕಾದಂಬರಿಕಾರನಿಗೆ ಕತೆಯ ಬೆಳವಣಿಗೆ ಮುಖ್ಯವೆಂಬುದನ್ನು ಸ್ಪಷ್ಟವಾಗಿ ವಿವರಿಸಿದೆ. ಕ್ರಿಯಾಪ್ರಧಾನ ಕಾದಂಬರಿಯಲ್ಲಿ ಅತ್ಯಂತ ಸರಳರೂಪ ಕಂಡರೂ ಕತೆ ಹೇಳುವಾಗ ಸಹಜವಾಗಿ, ಅನಿವಾರ್ಯವಾಗಿ ಕಾದಂಬರಿಕಾರ ಕೆಲವು ಸಾಮಗ್ರಿಗಳನ್ನು ಬಳಸಿಕೊಳ್ಳಬೇಕಾಗುವುದೆಂಬ ವಿಚಾರಗಳು ಇಲ್ಲಿ ಪ್ರಸ್ತಾಪವಾಗಿವೆ. "ವಸ್ತು, ಗಾತ್ರ, ಆವರಣ, ಹಿನ್ನೆಲೆ, ಶೈಲಿ–ಇವೆಲ್ಲವುಗಳ ಪ್ರಾಮುಖ್ಯತೆ ಕಾದಂಬರಿಕಾರನ ಉದ್ದೇಶವನ್ನು ಹೊಂದಿಕೊಂಡಿರುತ್ತದೆ"ಎಂದು[2] ಎಲ್.ಎಸ್.ಎಸ್ ಗುರುತಿಸಿದ್ದಾರೆ. ಲಲಿತ ಕಲೆಗಳಲ್ಲಿ ಒಂದಾದ ಸಾಹಿತ್ಯದ ಒಂದು ವಿಭಾಗ ಎಂದು ಕಾದಂಬರಿ ಪ್ರಕಾರವನ್ನು ಭಾವಿಸಿರುವ ಇವರು, ಸಾಹಿತ್ಯಕ್ಕೆ ಅನ್ವಯಿಸುವ ಸೂತ್ರಗಳನ್ನು ಕಾದಂಬರಿಗೂ ಅನ್ವಯಿಸಿದ್ದಾರೆ. ಕಾದಂಬರಿ ಪರಿಣಾಮಕಾರಿಯಾಗಿ ಬರಲು ಜಗತ್ತನ್ನು ಕಾದಂಬರಿಕಾರ ಬಹು ಎಚ್ಚರಿಕೆಯಿಂದ ಸೃಷ್ಟಿಸಬೇಕೆಂಬುದರ ವಿವರಗಳು ಈ ಅಧ್ಯಾಯದಲ್ಲಿವೆ. ಕೃತಿಯ ಸಾಮರಸ್ಯಕ್ಕೆ ಸಮಷ್ಟಿ ಐಕ್ಯತೆಗೆ ಎಲ್ಲಿಯೂ ಭಂಗವಿರಬಾರದೆಂದು ಕಾದಂಬರಿ ರಚನಾಕಾರರಿಗೆ ನೀಡಿರುವ ಸೂಚನೆಗಳಿವೆ. ಕಾದಂಬರಿಕಾರನಿಗೆ ಕತೆಯ ಬೆಳವಣಿಗೆ ಮುಖ್ಯವೆಂಬುದನ್ನು ಸ್ಪಷ್ಟವಾಗಿ ಇಲ್ಲಿ ವಿವರಿಸಿದೆ.

ತನ್ನ ಕೃತಿಯಲ್ಲಿ ಕಾದಂಬರಿಕಾರ ಒಂದು ಜಗತ್ತನ್ನು ಸೃಷ್ಟಿಸಲು ಹೊರಟಾಗ ಆತ ಉಂಟುಮಾಡಲು ಅಪೇಕ್ಷಿಸಿದ ಪರಿಣಾಮದ ಸಹಾಯಕ್ಕೆ ಅನುಕೂಲವಾದ ವಿವರಗಳ ಆಯ್ಕೆ ಆತನಿಗೆ ಗೊತ್ತಿರುತ್ತದೆಂಬ ಅಂಶದ ಕಡೆಗೆ ಮೂರನೆಯ ಅಧ್ಯಾಯದಲ್ಲಿಕೃತಿಕಾರರು ಗಮನ ಸೆಳೆದಿದ್ದಾರೆ. ಕಾದಂಬರಿ ಪ್ರಕಾರಕ್ಕೆ

ಸಂಬಂಧಿಸಿದಂತೆ ಹೇಳಿದ ಅಂಶಗಳನ್ನು ಅ.ನ.ಕೃ. ಅವರ ಕಣ್ಣೀರು, ವಿ.ಎಂ. ಇನಾಂದಾರರ ಕನಸಿನ ಮನೆ, ಶಿವರಾಮ ಕಾರಂತರ ಚೋಮನ ದುಡಿ, ಕೆ.ವಿ. ಅಯ್ಯರ್ ಅವರ ರೂಪದರ್ಶಿ–ಈ ನಾಲ್ಕು ಕಾದಂಬರಿಗಳಿಗೆ ಅನ್ವಯಿಸಿ ಸ್ಪಷ್ಟಪಡಿಸಲಾಗಿದೆ.ಬಸವರಾಜ ಕಟ್ಟೀಮನಿಯರವರ ಜರತಾರಿ ಜಗದ್ಗುರು ಕಾದಂಬರಿಯನ್ನು ನಿದರ್ಶನವಾಗಿಟ್ಟುಕೊಂಡು ಕ್ರಿಯಾಪ್ರಧಾನವಾದ ಕಾದಂಬರಿಯಂತೆ ಇಲ್ಲಿ ವಸ್ತುವಿನ ಬಂಧ ಬಿಗಿಯಿಲ್ಲದಿರುವಿಕೆ, ಘಟನೆಗಳು, ಅವುಗಳ ಕ್ರಮಗಳು ಇಂತಹ ಕಾದಂಬರಿಗಳಲ್ಲಿ ಅನಿವಾರ್ಯವಲ್ಲವೆಂಬ ಅಂಶ, ಕತೆಯ ಮುಕ್ತಾಯ ಅನಿವಾರ್ಯವಲ್ಲದಿರುವಿಕೆ–ಈ ಅಂಶಗಳನ್ನು ಇದೇ ಅಧ್ಯಾಯದಲ್ಲಿ ವಿಶ್ಲೇಷಿಸಿದ್ದಾರೆ. ಈ ಕಾದಂಬರಿಯಲ್ಲಿ ವ್ಯಕ್ತಿತ್ವದ ನಿರೂಪಣೆ, ಪಾತ್ರ ನಿರೂಪಣೆ, ಕಾದಂಬರಿ ವಸ್ತು ಒಂದು ಸಾಧನವಾಗಿ ರೂಪುಗೊಂಡಿರುವಂತೆ ಇವರಿಗೆ ಅನಿಸಿದೆ.

ವಸ್ತು–ಪಾತ್ರಗಳಿಗೆ ಮತ್ತಷ್ಟು ನಿಕಟ ಸಂಬಂಧ ಕಲ್ಪಿಸಿ ಎರಡನ್ನು ಒಟ್ಟಾರೆ ಬೆಸೆಯುವ ನಾಟಕೀಯ ಕಾದಂಬರಿಗಳ ಗುಣಗಳ ಬಗ್ಗೆ ನಾಲ್ಕನೆಯ ಅಧ್ಯಾಯದಲ್ಲಿ ವಿಶ್ಲೇಷಣೆಗಳಿವೆ. ಈ ಅಧ್ಯಾಯದಲ್ಲಿ ಕಾದಂಬರಿಯಲ್ಲಿ ವಸ್ತು ಮತ್ತು ಪಾತ್ರಗಳಿಗೆ ಇರಬಹುದಾದ ಸಂಬಂಧಗಳನ್ನು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಲಾಗಿದೆ. "ಎಂತಹ ಕಾದಂಬರಿಯಲ್ಲಿಯೂ ವಸ್ತುವಿಗೆ ಕೊನೆಯ ಪಕ್ಷ ಚಿತ್ರದ ಚೌಕಟ್ಟಿರುವ ಸ್ಥಾನ ಉಂಟು"[3] ಎಂದಿರುವ ಕೃತಿಕಾರರು ಅನಕೃ ಅವರ 'ಕನ್ನಡಮ್ಮನ ಗುಡಿಯಲ್ಲಿ' ಕಾದಂಬರಿಯನ್ನು ನಿದರ್ಶನಕ್ಕೆ ಬಳಸಿಕೊಂಡಿದ್ದಾರೆ.

ಕಾದಂಬರಿಕಾರ ಸೃಷ್ಟಿಸುವ ಪಾತ್ರಗಳ ಕುರಿತಂತೆ ಐದನೆಯ ಅಧ್ಯಾಯದಲ್ಲಿ ಪ್ರತ್ಯೇಕ ಚರ್ಚೆಗಳಿವೆ. ಕಾದಂಬರಿಗೆ ಪಾತ್ರಗಳ ಮಹತ್ವ, ಕಾದಂಬರಿಗಳಲ್ಲಿ ಕಾಣುವ ಪಾತ್ರಗಳನ್ನು ಕೆಲವು ವಿಮರ್ಶಕರು ಬೇರೆ ರೀತಿ ವಿಂಗಡಿಸಿರುವ ರೀತಿಗಳ ಕುರಿತ ಪ್ರಸ್ತಾಪಗಳು ಇಲ್ಲಿವೆ. ಇ.ಎಂ. ಫಾರ್‌ಸ್ಟರ್ ಎನ್ನುವ ಕಾದಂಬರಿಕಾರ, ವಿಮರ್ಶಕ ಪಾತ್ರಗಳನ್ನು ಚಪ್ಪಟೆ ಮತ್ತು ತುಂಬಿದ ಪಾತ್ರಗಳೆಂದು ವಿಂಗಡಿಸಿರುವುದರ ಬಗ್ಗೆ ವಿಶ್ಲೇಷಿಸಿರುವ ಎಲ್.ಎಸ್.ಎಸ್ ಅ.ನ.ಕೃ ಅವರ ಹೊಸಲು ದಾಟಿದ ಹೆಣ್ಣು ಕಾದಂಬರಿಯ ಪಾತ್ರಗಳನ್ನು ತಮ್ಮ ಹೇಳಿಕೆಗೆ ಅನುಗುಣವಾಗಿ ವಿವೇಚಿಸಿದ್ದಾರೆ. ಜೊತೆಗೆ ನಾ. ಕಸ್ತೂರಿ ಅವರ ಶಂಖವಾದ್ಯ ಕೃತಿಯ ಬಗ್ಗೆಯು ಇಲ್ಲಿ ಪ್ರಸ್ತಾಪಿಸಲಾಗಿದೆ. ಕಾದಂಬರಿಕಾರ ಬರಿ ತುಂಬು ಪಾತ್ರಗಳನ್ನಷ್ಟೆ ಸೃಷ್ಟಿಸಲಾರ. ಚಪ್ಪಟೆ ಪಾತ್ರಗಳು ಅಗತ್ಯವೆಂದು ಅವುಗಳ ಪ್ರಾಮುಖ್ಯತೆಯನ್ನು ಇಲ್ಲಿ ಸ್ಪಷ್ಟಪಡಿಸಿದೆ.

ಪಾತ್ರ ಸೃಷ್ಟಿಯ ವಿವೇಚನೆಯಲ್ಲಿ, ಕಾದಂಬರಿಕಾರನಲ್ಲಿ ತನ್ನ ಪಾತ್ರಗಳ ಬಗೆಗೆ ಅನುಕಂಪ ಅಗತ್ಯವೆಂಬ ಅಂಶದ ಬಗ್ಗೆ ಕೃತಿಕರರು ಇದೇ ಅಧ್ಯಾಯದಲ್ಲಿ ಪ್ರತ್ಯೇಕವಾಗಿ ಎಲ್.ಎಸ್.ಎಸ್ ಚರ್ಚಿಸಿದ್ದಾರೆ. ಪೂರ್ವಭಾವಿಯಾಗಿ ಮಾಡಿದ ನಿರ್ಧಾರಗಳನ್ನು ಕಾದಂಬರಿಕಾರನು ತ್ಯಜಿಸಿ ಪ್ರತಿಪಾತ್ರವನ್ನು ಸಂಪೂರ್ಣವಾಗಿ ಕಲ್ಪನೆಯಲ್ಲಿ ನಿಲ್ಲಿಸಿ ನೋಡಬೇಕು; ಪಕ್ಷಪಾತವಿರಬಾರದೆಂಬುದು ಇವರ ನಿಲುವು. "ತನ್ನ ವ್ಯಕ್ತಿತ್ವವನ್ನು ಮರೆತು ತನ್ನ ಪಾತ್ರದ ಸನ್ನಿವೇಶ, ಹೃದಯಗಳನ್ನು ಅರಿತುಕೊಳ್ಳುವ ಶಕ್ತಿ ಎಲ್ಲ ಹಿರಿಯ ಕಾದಂಬರಿಕಾರರಿಗೂ ಅವಶ್ಯ"[4] ಎಂದಿರುವ ಇವರು ಶ್ರೀನಿವಾಸರ ಸುಬ್ಬಣ್ಣ ಮತ್ತು ಚೆನ್ನಬಸವನಾಯಕ ಕಾದಂಬರಿಗಳನ್ನು ನಿದರ್ಶನಕ್ಕೆ ಬಳಸಿಕೊಂಡಿದ್ದಾರೆ.ಕಾದಂಬರಿಕಾರ ತನ್ನ ಪಾತ್ರಗಳಿಂದ ಅನಿರೀಕ್ಷಿತ ಹಾಗೂ ಅಸಹಜವಾದ ಕಾರ್ಯಗಳನ್ನು ಮಾಡಿಸಬಹುದಾದ ಸಾಧ್ಯತೆಗಳಿಗೆ ಸಂಬಂಧಿಸಿದಂತೆಯೂ ಇಲ್ಲಿ ಚರ್ಚೆಗಳಿವೆ. ತನ್ನ ವ್ಯಕ್ತಿತ್ವವನ್ನು ಕಾದಂಬರಿಕಾರ ಬದಿಗೊತ್ತಿ ತಾನು ಪಾತ್ರದಲ್ಲಿ ಒಂದಾಗಬೇಕೆಂಬ

ಅಭಿಪ್ರಾಯ ಶೇಷಗಿರಿರಾಯರದು."ಅನುಕಂಪ ಕಾದಂಬರಿಕಾರನಲ್ಲಿ ಇರಬೇಕೆಂಬ ಮಾತ್ರಕ್ಕೆ ಅವನು ತಾರತಮ್ಯ ಮಾಡಬಾರದು, ಯಾವ ಜೀವನ ಮೌಲ್ಯಗಳನ್ನು ಸೂಚಿಸಬಾರದು ಎಂದು ಅರ್ಥವಲ್ಲ"ಎಂದು[5] ಸೂಚಿಸಿ ಕೆಲ ಕಾದಂಬರಿಕಾರರು ಮೌಲ್ಯ ಸೂಚಿಸದೆ, ಸ್ವಭಾವವನ್ನು ಗುರಿಯಾಗಿಸಿ ಬರೆಯಬಹುದು ಅಥವಾ ತತ್ವ, ಆದರ್ಶಗಳನ್ನು ನಿರೂಪಿಸಿ ಜನತೆಯ ಬಾಳನ್ನು ತಿದ್ದುವುದು ಕಾದಂಬರಿಕಾರನ ಉದ್ದೇಶವಾಗಿರಬಹುದೆಂಬ ಅಂಶಗಳ ಕಡೆಗೆ ಕೃತಿಕಾರರು ಓದುಗರ ಗಮನ ಸೆಳೆದಿದ್ದಾರೆ. ಪಾತ್ರಗಳಲ್ಲಿ ಪಕ್ಷಪಾತ ತೋರುವುದರಿಂದ ಕಾದಂಬರಿ ಕಲೆಗೆ ಭಂಗ ಬರುವುದೆಂಬ ಆತಂಕದ ಬಗ್ಗೆಯೂ ಇಲ್ಲಿ ವಿವರಗಳಿವೆ. ಕುವೆಂಪು ಅವರ ಕಾನೂರು ಹೆಗ್ಗಡತಿ ಕಾದಂಬರಿಯನ್ನು ಉದಾಹರಿಸಿರುವ ಇಲ್ಲಿನ ಪಾತ್ರಸೃಷ್ಟಿಯಲ್ಲಿ ಉತ್ತಮ ಕಾದಂಬರಿಕಾರನ ಪಾತ್ರಸೃಷ್ಟಿ, ಕಲೆಯ ಎಲ್ಲ ಲಕ್ಷಣಗಳು ಈ ಕಾದಂಬರಿಯಲ್ಲಿ ಇರುವುದಾಗಿ ತಿಳಿಸಲಾಗಿದೆ.

ಕಾದಂಬರಿಯ ತಂತ್ರಗಾರಿಕೆ ಕುರಿತಂತೆ ವಿವರವಾದ ಚರ್ಚೆಗಳು ಆರನೆಯ ಅಧ್ಯಾಯದಲ್ಲಿವೆ. ಕತೆಯ ಮೂಲಕ ಕಾದಂಬರಿಕಾರ ಬೇರೊಂದು ಗುರಿ ಸಾಧಿಸಬಯಸುತ್ತಾನೆಂಬುದು ಕೃತಿಕಾರರ ನಿಲುವು. ಈ ಗುರಿಯನ್ನು ಎಷ್ಟರ ಮಟ್ಟಿಗೆ ಸಾಧಿಸುತ್ತಾನೆ ಎನ್ನುವುದು, ಅವನು ಪಾತ್ರಗಳನ್ನು ಹೇಗೆ ಸೃಷ್ಟಿಸುತ್ತಾನೆ, ಸನ್ನಿವೇಶಗಳನ್ನು ಹೇಗೆ ನಿರ್ಮಿಸುತ್ತಾನೆ ಎನ್ನುವುದು ಅವನ ತಂತ್ರವನ್ನು ಅವಲಂಬಿಸುತ್ತದೆ–ಈ ಅಂಶಗಳು ಕಾದಂಬರಿ ಪ್ರಕಾರದ ತಂತ್ರಗಳನ್ನು ಕುರಿತ ಕೃತಿಕಾರರ ಚಿಂತನೆಗಳಾಗಿವೆ. ಕಾದಂಬರಿ ಜೀವನದ ಪ್ರತಿಬಿಂಬವಲ್ಲದೆ ಅದು ಪ್ರತಿಸೃಷ್ಟಿ, ಕಲಾತ್ಮಕ ನಿರೂಪಣೆ ಎನ್ನುವುದಾದರೆ ತಂತ್ರದ ದೃಷ್ಟಿಯಿಂದ ಕಾದಂಬರಿಕಾರನ ದೃಷ್ಟಿ ಅವನ ನಿಲುವು ತುಂಬ ಮುಖ್ಯ ಅಂಶವೆಂದು ಗುರುತಿಸಿ ನಿರಂಜನರ–ರಂಗಮ್ಮನ ವಠಾರ ಕಾದಂಬರಿಯಲ್ಲಿನ ತಂತ್ರವನ್ನು ಕುರಿತು ಚರ್ಚಿಸಿದ್ದಾರೆ. ಈ ಕಾದಂಬರಿಯಲ್ಲಿ ಕಾದಂಬರಿಕಾರ ತಾನು ಚಿತ್ರಿಸುವ ಜೀವನಭಾಗವನ್ನು ನಿಷ್ಪಕ್ಷವಾಗಿ ಕಂಡಿದ್ದಾನೆಂಬುದು ಕೃತಿಕಾರರ ಗ್ರಹಿಕೆ. ಸಣ್ಣಕತೆಗಿಂತ ಕಾದಂಬರಿಯು ಹೆಚ್ಚು ಸ್ವಾತಂತ್ರ್ಯವನ್ನು ಬರಹಗಾರನಿಗೆ ನೀಡುತ್ತದೆಂಬ ಅಂಶದ ಕಡೆಗೂ ಎಲ್.ಎಸ್.ಎಸ್ ಇಲ್ಲಿ ಗಮನಹರಿಸಿದ್ದಾರೆ. ಹಾಗೆಯೇ ಕಾದಂಬರಿ ಒಂದು ಕಲಾಕೃತಿ ಎನ್ನುವುದನ್ನು ಮರೆಯಲಾಗದು ಎಂದಿರುವ ಇವರು "ಮೆಡಾಂಬವರಿಯಂತಹ ಒಂದು ಕೃತಿ ಪರಿಪೂರ್ಣ ಕಲಾಸೃಷ್ಟಿ"ಎಂದಿದ್ದಾರೆ.[6] ಆಂಗ್ಲ ಸಾಹಿತ್ಯದಲ್ಲಿ ಹೆನ್ರಿ ಜೇಮ್ಸ್, ವರ್ಜೀನೀಯ ವುಲ್ಫ್, ಜೇನ್ ಆಸ್ಟಿನ್ ಮುಂತಾದ ಕಾದಂಬರಿಕಾರರ ಕಾದಂಬರಿಗಳು ಚಿತ್ರಕಾರ ಎಷ್ಟು ಎಚ್ಚರಿಕೆಯಿಂದ ಚಿತ್ರಬಿಡಿಸುತ್ತಾನೆಯೋ ಅಷ್ಟೊಂದು ಕಲಾತ್ಮಕತೆಯನ್ನು ಒಳಗೊಂಡಿರುವುದಾಗಿ ಹೇಳಿ ಅವುಗಳನ್ನು ಪ್ರಸ್ತಾಪಿಸಿದ್ದಾರೆ. ಕಾದಂಬರಿಕಾರನ ಮಾರ್ಗದರ್ಶನದ ಅವಶ್ಯಕತೆ ಹೆಚ್ಚಿಲ್ಲದೆ ಓದುಗರು ಅರ್ಥ ಮಾಡಿಕೊಳ್ಳಲು ಸಾಧ್ಯವಿರುವ ಕಡೆ ನಾಟಕ ತಂತ್ರ ಮುಖ್ಯವೆಂದು ನಿಸರ್ಗ, ಸರ್ವಮಂಗಳಾ ಕಾದಂಬರಿಗಳನ್ನು ಉದಾಹರಿಸಿದ್ದಾರೆ. "ಕತೆಯನ್ನು 'ವೃತ್ತಾಂತ ಅಥವಾ ದೃಶ್ಯ ಚಿತ್ರಣ'ದಲ್ಲಿ ಹೇಳಬಹುದು.ಕಾದಂಬರಿಕಾರ ವೃತ್ತಾಂತ ನಾಟಕೀಯ ತಂತ್ರ ಬಿಟ್ಟು ಹೋಗಲಾರ.ವೃತ್ತಾಂತ ತಂತ್ರದಲ್ಲಿ ನಾಟಕೀಯತೆಯೂ ಸೇರಿರುತ್ತದೆ. ಆತ್ಮ ವೃತ್ತಾಂತ ತಂತ್ರದಲ್ಲಿ ಅನುಕೂಲಗಳೂ ಉಂಟು, ಮಿತಿಗಳು ಉಂಟು" ಎನ್ನುವ[7] ವಿಚಾರಗಳನ್ನು ಪ್ರಸ್ತುತಪಡಿಸಿ ಪ್ರಜ್ಞಾಪ್ರವಾಹಿ ತಂತ್ರದ ಬಗೆಗೂ ವಿವರ ನೀಡಿದ್ದಾರೆ.

ಪಾತ್ರ, ವಸ್ತು, ಶೈಲಿ, ತಂತ್ರ ಎಲ್ಲವೂ ಕಾದಂಬರಿಯಲ್ಲಿ ಮುಖ್ಯವೆನಿಸಿದರೂ ಓದುಗ ಕಾದಂಬರಿಯಿಂದ ನಿರೀಕ್ಷಿಸಬಹುದಾದ ಅಂಶಗಳೇನು ಎನ್ನುವ ಪ್ರಶ್ನೆಗೆ ವಿವರವಾದ ಚರ್ಚೆಗಳು ಏಳನೆಯ ಅಧ್ಯಾಯದಲ್ಲಿವೆ.

ಕೃತಿಕಾರರು ಕಾದಂಬರಿಯಿಂದ ಮೊದಲು ನಿರೀಕ್ಷಿಸಿರುವುದು ಆನಂದವನ್ನು ಮಾತ್ರ. ಕಾದಂಬರಿಯಿಂದ ನಿರೀಕ್ಷಿಸಬಹುದಾದ ಅಂಶಗಳ ಬಗ್ಗೆ ಡಿ.ಎಚ್. ಲಾರೆನ್ಸ್ ಹೇಳಿರುವ ವಿಚಾರಗಳನ್ನು ಸಾಂದರ್ಭಿಕವಾಗಿ ಇಲ್ಲಿ ಪ್ರಸ್ತಾಪಿಸಲಾಗಿದೆ. ಇದರ ಜೊತೆಗೆ ಜೀವನದ ಕಾಲ್ಪನಿಕ ನಿರೂಪಣೆಯಿಂದ ಮನುಷ್ಯನ ಮಾನವೀಯತೆಯನ್ನು ಹೆಚ್ಚಿಸುವ ಕಾರ್ಯವನ್ನು ಕಾದಂಬರಿ ಯಾವ ರೀತಿ ಮಾಡಬಲ್ಲದು ಎನ್ನುವ ವಿಚಾರಗಳಿಗೆ ಸಂಬಂಧಿಸಿದ ಉದಾಹರಣೆ ಸಹಿತ ವಿವರಗಳಿವೆ. "ವ್ಯಕ್ತಿ ಸನ್ನಿವೇಶಗಳ ಮಾನವೀಯ ದೃಷ್ಟಿಯ ವಿವರಣೆಯೇ ಕಾದಂಬರಿ ಸಾಧಿಸಬಹುದಾದ ವಾಸ್ತವಿಕತೆ, ಈ ವಾಸ್ತವಿಕತೆಯಿಂದಲೇ ಸಹಾನುಭೂತಿಯ ಮಾರ್ಗದರ್ಶನ ಸಾಧ್ಯ"ವೆಂದು[8] ಕೃತಿಕಾರರು ಅಭಿಪ್ರಾಯಪಟ್ಟಿದ್ದಾರೆ. ಸಹಾನುಭೂತಿಯ ಮಾರ್ಗದರ್ಶನ ಎನ್ನುವ ಪದಕ್ಕೆ ಇರುವ ವ್ಯಾಪಕ ಅರ್ಥದ ಬಗ್ಗೆ ಚರ್ಚೆಗಳು ಇಲ್ಲಿವೆ. ಕಾದಂಬರಿಕಾರನ ಸಾಮಗ್ರಿ ಮನುಷ್ಯ ಜೀವನವಾಗಿರಬೇಕೆಂಬ ನಿಲುವಿಗೆ ಆಧಾರವಾಗಿ ಹಲವು ವಿಚಾರಗಳನ್ನು ಚರ್ಚೆಗೆ ತರಲಾಗಿದೆ.

ಕಾದಂಬರಿ ಪ್ರಕಾರ ಬೆಳೆದು ಬಂದ ಬಗೆ, ಜನರಿಂದ ಅದು ಆಕರ್ಷಿತವಾಗಲು ಕಾರಣಗಳು, ಕಾದಂಬರಿ ವೈಶಿಷ್ಟ್ಯತೆ ಕುರಿತು ವಿವರವಾದ ಚರ್ಚೆ ಎಂಟನೆಯ ಅಧ್ಯಾಯದಲ್ಲಿದೆ. ಕನ್ನಡದಲ್ಲಿ ಕಾದಂಬರಿ ಬೆಳೆದು ಬಂದ ಇತಿಹಾಸದ ಬಗ್ಗೆ ಇಲ್ಲಿ ಸಂಕ್ಷಿಪ್ತ ವಿವರಗಳಿವೆ. ಕಾದಂಬರಿ ಇಷ್ಟು ವೇಗವಾಗಿ ಬೆಳೆದು ಜನಪ್ರಿಯವಾಗಲು "ಸಾಮಾಜಿಕ ಜೀವನದಲ್ಲಿನ ಬದಲಾವಣೆಗಳು ಕಾರಣ" ಎನ್ನುವುದು ಕೃತಿಕಾರರ ಅಭಿಮತ.[9] ಈ ಬದಲಾವಣೆಗಳ ಅರ್ಥ ಪರಿಣಾಮಗಳನ್ನು ಗಮನಿಸುವುದರ ಅಗತ್ಯತೆ ಕುರಿತಾಗಿಯೂ ಇಲ್ಲಿ ತಿಳಿಸಲಾಗಿದೆ. ಕಾದಂಬರಿಯನ್ನು ಜೀವನದ ವಾಸ್ತವಿಕತೆಯ ಅನ್ವೇಷಣೆಯ ನೆಲೆಯಲ್ಲಿ ಗುರುತಿಸಲಾಗಿದೆ. ಕಾದಂಬರಿ ಓದುವಾಗ ನೆನಪಿಡಬೇಕಾದ ಹಲವು ಮಹತ್ವದ ಅಂಶಗಳ ಬಗ್ಗೆಯೂ ಇಲ್ಲಿಯೇ ತಿಳಿಸಿದೆ. ಕಾದಂಬರಿಕಾರನ ದೃಷ್ಟಿ ಜೀವನ ದೃಷ್ಟಿಯ ಭಾಗವಾದಾಗ ಕಾದಂಬರಿ ಯಾವ ರೀತಿ ಮಹತ್ವ ಪಡೆಯಬಲ್ಲದೆಂಬುದಕ್ಕೆ ಎಂ.ಎಸ್. ಪುಟ್ಟಣ್ಣ ಅವರ ಮಾಡಿದ್ದುಣ್ಣೊ ಮಹಾರಾಯ, ಕಾರಂತರ ಚೋಮನದುಡಿ ಕಾದಂಬರಿಗಳ ಪಾತ್ರಗಳನ್ನು ಉದಾಹರಿಸಲಾಗಿದೆ.ಸಂಕೀರ್ಣ ಬದುಕಿನಲ್ಲಿ ಕಾದಂಬರಿಕಾರನ ಕಲ್ಪನೆಯನ್ನು ಪ್ರಚೋದಿಸಿದ ಒಂದು ಭಾಗವನ್ನು ಕೃತಿ ವಿಶ್ಲೇಷಿಸುತ್ತದೆ ಎಂಬ ಕೃತಿಕಾರರ ಅಭಿಪ್ರಾಯವು ಕಾನೂರು ಹೆಗ್ಗಡಿತಿ,ಮರಳಿ ಮಣ್ಣಿಗೆ, ಗೃಹಭಂಗ ಕಾದಂಬರಿಗಳ ಜೀವನದ ಅನುಭವಗಳಿಗೆ ಸಂಬಂಧಿಸಿದಂತೆ ಒಳಗೊಂಡಿಲ್ಲದಿರುವುದು ಗಮನಿಸಬೇಕಾದ ಅಂಶ.

ಗ್ರಾಮಾಯಣ ಕಾದಂಬರಿಯ ನಿದರ್ಶನದ ಮೂಲಕ ಕಾದಂಬರಿಕಾರ ಬಾಳಿನ ಸತ್ಯವನ್ನು ಅನ್ವೇಷಿಸುವನು, ಅವನು ಕಂಡ ಸತ್ಯ ಕಾದಂಬರಿಯಲ್ಲಿ ರೂಪ ಪಡೆದಿದೆ ಎಂದರೂ ಅದೇ ಬಾಳಿನ ಏಕೈಕ ಸತ್ಯವಲ್ಲ ಎಂಬುದನ್ನು ಕೃತಿಕಾರರುತಿಳಿಸಿದ್ದಾರೆ. ಕಾದಂಬರಿಕಾರ ಅನ್ವೇಷಣೆಕಾರ, ವಿಜ್ಞಾನಿ ಅಥವಾ ತತ್ತ್ವಶಾಸ್ತ್ರಜ್ಞನಿಗಿಂತ ಭಿನ್ನವೆಂದು ಹೇಳಿರುವ ಇವರು ಮಾಲಿನ್ ಜಡ್ ಷೋಡರ್‌ನ – ದಿ ನಾವೆಲ್ ಆ್ಯಸ್ ಎ ಜನರ್ ಲೇಖನದ ಮಾತುಗಳನ್ನು ಉಲ್ಲೇಖಿಸಿ ಮಾಸ್ತಿಯವರ ಸುಬ್ಬಣ್ಣ ಕಾದಂಬರಿಯನ್ನು ಇದಕ್ಕೆ ಉದಾಹರಿಸಿದ್ದಾರೆ. ಅತಿಭಾವುಕತೆಯನ್ನು ಕಾದಂಬರಿ ಪಾತ್ರಗಳಿಗೆ ತಂದಾಗ ವಿಮರ್ಶೆ, ತಾರತಮ್ಯ, ವಿವೇಚನೆಗೆ ಒದಗುವ ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚೆಗಳಿವೆ. ಕಾದಂಬರಿಕಾರ ನಾಯಕನಿಂದ ಸಾಕಷ್ಟು ದೂರ ನಿಲ್ಲದೆ ಹೋದಾಗ ವಿಮರ್ಶಾ ಪ್ರಜ್ಞೆ ಹೇಗೆ ನಿಷ್ಕ್ರಿಯವಾಗುತ್ತದೆ ಎಂಬ ಅಂಶವನ್ನು ಅನಂತಮೂರ್ತಿ

ಅವರ ಭಾರತೀಪುರ ಕಾದಂಬರಿ ಮೂಲಕ ಕೃತಿಕಾರರು ಸ್ಪಷ್ಟಪಡಿಸಿದ್ದಾರೆ.ಕಾದಂಬರಿಕಾರನ ಅನ್ವೇಷಣೆ ಸ್ಪಷ್ಟವಾದ 'ದರ್ಶನ' ಅಥವಾ ನೋಟಕ್ಕೆ ಕರೆದೊಯ್ದಾಗ ಕೃತಿ ಎಷ್ಟರ ಮಟ್ಟಿಗೆ ಸಾವಯವವಾಗುತ್ತದೆ ಎನ್ನುವುದನ್ನು ಥಾಮಸ್ ಹಾರ್ಡಿಯ 'ಲೆಸ್ ಆಫ್ ದಿ ಡಬಕರ್ ವಿಲ್' ಕಾದಂಬರಿ ನಿದರ್ಶನವಾಗಿ ಇಟ್ಟು ವಿವರಿಸಿದ್ದಾರೆ. "ಒಂದೇ ಕೃತಿ ವ್ಯಕ್ತಿಯ ಬಾಳಿನ ತ್ರಿಕೋನದ ಮೂರು ಬಿಂದುಗಳನ್ನು ಮುಟ್ಟುವಷ್ಟು ಶ್ರೀಮಂತವಾಗಬಹುದು" ಎಂದು[10] ಅಭಿಪ್ರಾಯಪಟ್ಟು ಚೆಮ್ಮೀನ್ ಕಾದಂಬರಿ ಉದಾಹರಿಸಿದ್ದಾರೆ. ಹೀಗೆ ಹಲವು ದೃಷ್ಟಿಕೋನಗಳೊಂದಿಗೆ ಕಾದಂಬರಿಯಲ್ಲಿ ಓದುಗನಿಗೆ ಮಹತ್ವವೆನಿಸಿದ ಅಂಶಗಳನ್ನು ಉದಾಹರಣೆಗಳ ಮೂಲಕ ಕೃತಿಕಾರರು ಸ್ಪಷ್ಟಪಡಿಸಿದ್ದಾರೆ.

ಕೊನೆಯ ಹಾಗೂ ಒಂಬತ್ತನೆಯ ಅಧ್ಯಾಯದಲ್ಲಿ ಕನ್ನಡ ಕಾದಂಬರಿಕಾರರು ಬರೆಯುತ್ತಲಿರುವ ಕಾದಂಬರಿಗಳನ್ನು ಕೃತಿಕಾರರು ಮೂರು ವರ್ಗಗಳಾಗಿ ವಿಂಗಡಿಸಿರುವುದು ಕಾಣುತ್ತದೆ. ಒಂದನೆಯದು ಕೆಲವು ಬಗೆಯ ಪಾತ್ರಗಳ ಬದುಕಿನಲ್ಲಿ ನಡೆದ ಕೆಲವು ಘಟನೆಗಳನ್ನು ಒಂದು ಸರಳವಾದ ಉದ್ದೇಶದಿಂದ ಬಿತ್ತರಿಸುವ ವಿಧಾನ, ಎರಡನೆಯದು ಕಾದಂಬರಿಗಳನ್ನು ಬರೆಯುವ ಕಾದಂಬರಿಕಾರ ತನ್ನ ಮಾಧ್ಯಮದ ಶಕ್ತಿಯಲ್ಲಿ ಅಪಾರ ವಿಶ್ವಾಸ ಇರುವವನು, ಕಾದಂಬರಿ ಶಕ್ತಿಯಲ್ಲಿ ಮಾತ್ರವಲ್ಲ ಸಾಹಿತ್ಯದ ಶಕ್ತಿಯಲ್ಲಿ ವಿಶ್ವಾಸ ಉಳ್ಳವನು – ಈ ವರ್ಗದಲ್ಲಿ ರಾಯರು ಪ್ರಗತಿಶೀಲ ಪಂಥದ ಕಾದಂಬರಿಗಳನ್ನು ಗುರುತಿಸಿದ್ದಾರೆ. ಮೂರನೆಯ ವರ್ಗದಲ್ಲಿ ನವ್ಯದ ಕಾದಂಬರಿಗಳನ್ನು ಗುರುತಿಸಿದ್ದಾರೆ. ಶೋಧನೆ, ವಿಶ್ಲೇಷಣೆ, ಪುನರ್‌ಸೃಷ್ಟಿ ಪರಿಕಲ್ಪನೆಗಳ ಬಗ್ಗೆ ಸ್ಪಷ್ಟ ವಿವರಣೆಗಳು, ಓದುಗರು ಅವರ ಮನೋಧರ್ಮ, ಅಭಿರುಚಿ, ಸಾಹಿತ್ಯ ಕೃತಿಗಳ ಓದಿನ ಅನುಭವ, ಪರಿಸರ ಹೀಗೆ ಒಬ್ಬನೇ ಕಾದಂಬರಿಕಾರ ವಿಭಿನ್ನವಾದ ರೀತಿ ಬರೆಯುತ್ತಾನೆಂಬುದರ ಅರಿವು– ಈ ಎಲ್ಲವು ಇಲ್ಲಿನ ವಿಷಯಗಳಾಗಿವೆ. ಕೃತಿಯ ಕೊನೆಯಲ್ಲಿ ಟಿಪ್ಪಣಿಗಳನ್ನು ಓದುಗರ ಅನುಕೂಲಕ್ಕಾಗಿ ನೀಡಲಾಗಿದೆ.

**ಉಪಸಂಹಾರ**

ಒಟ್ಟಾರೆ ಇಡೀ ಕೃತಿಯು ಸಾಮಾನ್ಯ ಓದುಗ ಕಾದಂಬರಿ ಓದನ್ನು ಮೆಚ್ಚುವ ಕಾರಣದಿಂದ ಆರಂಭವಾಗಿ ಕಾದಂಬರಿಯ ವಿವಿಧ ಅಂಗಗಳಾದ ಕತೆ, ಪಾತ್ರ, ವಸ್ತು, ತಂತ್ರ ಕುರಿತಂತೆ, ಉಪಯುಕ್ತ ವಿಚಾರಗಳನ್ನು ಒಳಗೊಂಡಿದೆ. ಕಾದಂಬರಿ ಪ್ರಕಾರದ ವೈಶಿಷ್ಟ್ಯಗಳು, ಅದು ಜನಪ್ರಿಯ ಪ್ರಕಾರವಾಗಲು ಕಾರಣಗಳನ್ನು ಕುರಿತು ಚರ್ಚಿಸುತ್ತದೆ. ಕೃತಿಕಾರರು ತಮ್ಮ ಪಾಶ್ಚಾತ್ಯ ಸಾಹಿತ್ಯದ ಜ್ಞಾನ ಹಾಗೂ ಕನ್ನಡ ಕಾದಂಬರಿ ಪ್ರಕಾರದ ಬೆಳವಣಿಗೆಯನ್ನು ಅರಗಿಸಿಕೊಂಡು ಕಾರಂತ, ಅ.ನ.ಕೃ, ಕುವೆಂಪು, ಅನಂತಮೂರ್ತಿ, ಥಾಮಸ್‌ಹಾರ್ಡಿ ಮುಂತಾದವರ ಕಾದಂಬರಿಗಳ ನಿದರ್ಶನದೊಂದಿಗೆ ತತ್ವ ಸಿದ್ಧಾಂತಗಳನ್ನು, ತಮ್ಮ ಚಿಂತನೆಗಳನ್ನು ಅಭಿವ್ಯಕ್ತಿಸಿದ್ದಾರೆ. ಕಾದಂಬರಿ ಬರೆಯುವವರಿಗೆ ಮಾರ್ಗದರ್ಶಕ ಸೂತ್ರ ಇಲ್ಲಿದೆ. ಕಾದಂಬರಿ ಓದುವವರಿಗೆ ಕಾದಂಬರಿಯ ಮೌಲ್ಯಮಾಪನಕ್ಕೆ ಅವಕಾಶ ಮಾಡಿಕೊಡುತ್ತದೆ.ವಿಮರ್ಶಕರಿಗೆ ವಿಮರ್ಶೆಯ ಅರಿವು ಮೂಡಿಸುತ್ತದೆ. ಕೃತಿಕಾರರು ಕಾದಂಬರಿಯ ಏಳೆಗಳನ್ನು ತಡಕುತ್ತಾ ಕಾದಂಬರಿಗೂ ಸಾಮಾನ್ಯ ಮನುಷ್ಯನಿಗೂ ಇರುವ ಸಂಬಂಧವನ್ನು, ಅವನ ಅಪೇಕ್ಷೆಗಳನ್ನು ತೆರೆದಿಡುತ್ತಾ ಕೃತಿಯನ್ನು ಕಾದಂಬರಿ ಓದುಗರ ಜೊತೆಗೆ ಇತರರಿಗೂ ಅನುಕೂಲವಾಗುವಂತೆ ರಚಿಸಿದ್ದಾರೆ.

ನನ್ನ ಅಭಿಪ್ರಾಯದಲ್ಲಿಕನ್ನಡ ಭಾಷೆಯಲ್ಲಿ ಕಾದಂಬರಿಯನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವನ್ನಾಗಿ ಅಧ್ಯಯನ ಮಾಡಿದ ವಿಮರ್ಶಾ ಕೃತಿ ಇದಾಗಿದೆ. ನಿರ್ದಿಷ್ಟ ಕತೆ, ಕವನ, ನಾಟಕ, ಕಾದಂಬರಿಗಳ ಕೃತಿ ಚರ್ಚೆ ನಡೆಯುತ್ತಿದ್ದ ಕಾಲದಲ್ಲಿ ಕಾದಂಬರಿಯ 'ಆಕೃತಿ' ಚರ್ಚೆಗೆ ಇಲ್ಲಿ ಕೃತಿಕಾರರು ತೊಡಗಿಕೊಂಡದ್ದು ಚಾರಿತ್ರಿಕವಾಗಿ ಮುಖ್ಯ. ಕಾದಂಬರಿಯ ವಿವಿಧ ಅಂಗಗಳನ್ನು ವಿಮರ್ಶಿಸುತ್ತಲೇ ಅದೊಂದು ಜನರನ್ನು ಬಹುಬೇಗ ಸೆಳೆದ ಸಾಹಿತ್ಯ ಪ್ರಕಾರ ಎನ್ನುವುದನ್ನು ಈ ಕೃತಿಯು ನಿರೂಪಿಸುತ್ತದೆ. ಕೆಲವೆಡೆ ಸೈದ್ಧಾಂತಿಕ ವಿಚಾರಗಳೂ ಎಡೆಪಡೆದಿವೆ. ವಿಮರ್ಶಕರಾದ ಹಡ್ಸನ್, ಎಡ್ವಿನ್‌ಮೂರ್, ಇ.ಎಂ ಫಾರ್ಸ್ಟರ್, ರಾಬರ್ಟ್‌ಲಿಡೆಲ್, ಫ್ಲಾಬರ್ಟ್, ಡಿ.ಎಚ್.ಲಾರೆನ್ಸ್, ವರ್ಜೀನಿಯವುಲ್ಫ್ ಮೊದಲಾದವರ ಅಭಿಪ್ರಾಯಗಳೊಂದಿಗೆ ಕನ್ನಡ ಕಾದಂಬರಿ ಸಾಹಿತ್ಯವನ್ನು ಹೋಲಿಸಿ ನೋಡಿದ್ದಾರೆ. ಸಾಹಿತ್ಯದಲ್ಲಿ ಆಸಕ್ತನಾಗಿದ್ದುಕೊಂಡು ಒಳ್ಳೆಯ ಕಾದಂಬರಿಗಳನ್ನು ಓದಿರುವ ಪರಿಣತನಲ್ಲದ ಕಲ್ಪಿತ ವ್ಯಕ್ತಿಯೊಬ್ಬನ ಜೊತೆ ನಿರೂಪಕನು ನಡೆಸುವ ಸಂಭಾಷಣೆಯ ಮೂಲಕ ಕಾದಂಬರಿ ಜನರಿಗೆ ಇಷ್ಟವಾಗುವುದು ಅದರ ಕಥೆಯ ಕಾರಣದಿಂದ ಹಾಗೂ ಅದನ್ನು ಓದುತ್ತಿದ್ದರೆ ಬೇರೆಲ್ಲವೂ ಮರೆತುಹೋಗುತ್ತದೆ ಎಂಬ ಕಾರಣವನ್ನು ಕೃತಿಕಾರರು ಗುರುತಿಸಿರುವುದು ಹೆಚ್ಚು ಆಕರ್ಷಣೀಯ ಭಾಗವಾಗಿದೆ. ಕೃತಿಕಾರರ ಪರಿಣತ ಭಾಷೆಯ ಬಳಕೆ, ನಿರೂಪಣೆಯ ಕುಶಲತೆ, ವಿಷಯ ಪ್ರಸ್ತುತತೆ ಕೃತಿಯಲ್ಲಿ ಕಾಣುತ್ತದೆ.ಸಾಮಾನ್ಯ ಓದುಗನಿಗೂ ಕೃತಿ ಇಷ್ಟವಾಗುತ್ತದೆ.

**ಕೊನೆಟಿಪ್ಪಣಿಗಳು**

1. ಶೇಷಗಿರಿರಾವ್. ಎಲ್. ಎಸ್. (2008). ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ, ವಸಂತ ಪ್ರಕಾಶನ, ಬೆಂಗಳೂರು, 2008, ಪು.4
2. ಅದೇ, ಪು. 10
3. ಅದೇ, ಪು. 47
4. ಅದೇ, ಪು. 60
5. ಅದೇ, ಪು. 66
6. ಅದೇ,: ಪು. 73
7. ಅದೇ, ಪು. 81
8. ಅದೇ, ಪು. 90
9. ಅದೇ, ಪು.97
10. ಅದೇ, ಪು. 110

**ಆಕರ ಗ್ರಂಥ**


- ಶೇಷಗಿರಿರಾವ್ ಎಲ್. ಎಸ್. (2008). ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ, ವಸಂತ ಪ್ರಕಾಶನ, ಬೆಂಗಳೂರು.


**ಪರಾಮರ್ಶನ ಗ್ರಂಥಗಳು**


- ಮಾವಿನಕೆರೆ ರಂಗನಾಥನ್ (ಸಂ.) (2007). ಎಲ್.ಎಸ್. ಶೇಷಗಿರಿರಾವ್ ಬದುಕು ಬರಹ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ನಾರಾಯಣ ಪಿ.ವಿ. (2006). ಎಲ್. ಎಸ್. ಶೇಷಗಿರಿರಾವ್. ನವಕರ್ನಾಟಕ ಪ್ರಕಾಶನ, ಬೆಂಗಳೂರು.